EX NO.41/22
P.W-2

<u>ದಿನಾಂಕಃ **20-08-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ತಕರಾರುದಾರರ ಪರವಾಗಿಃ-</u>

ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದೆ, ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಜಿ.ಪಿ.ಎ ಹಾಜರುಪಡಿಸಿದ್ದು ಅದನ್ನು ನಿ.ಪಿ-1 ಎಂದು, ಮರಣಶಾಸನದ ಧೃಢೀಕೃತ ನಕಲನ್ನು ನಿ.ಪಿ-2 ಎಂದು, ಕ್ರಯಪತ್ರದ ನಕಲನ್ನು ನಿ.ಪಿ-3 ಎಂದು, ಸಂಕೀರ್ಣ ಸಂಖ್ಯೆ 3/23 ರಲ್ಲಿಯ ಆದೇಶ ಪುಟದ ನಕಲನ್ನು ನಿ.ಪಿ-4 ಎಂದು, ಅರ್ಜಿಯ ನಕಲನ್ನು ನಿ.ಪಿ-5 ಎಂದು, ಖಾತಾ ನಕಲನ್ನು ನಿ.ಪಿ-6 ಎಂದು, ಪುರಸಭಾ ಕಾರ್ಯಾಲಯದ ಮಾಹಿತಿ ಪತ್ರವನ್ನು ನಿ.ಪಿ-7 ಎಂದು ಉತಾರನ್ನು ನಿ.ಪಿ-8 ಮತ್ತು 9 ಎಂದು, ಮೂಲದಾವೆ 152/21 ರಲ್ಲಿಯ ವಾದ ಪತ್ರದ ನಕಲನ್ನು ನಿ.ಪಿ-10 ಎಂದು, ಮುಖ್ಯ ವಿಚಾರಣೆಯ ನಕಲನ್ನು ನಿ.ಪಿ-11 ಎಂದು, ಲೀಗಲ್ ನೋಟೀಸ್ ನಕಲನ್ನು ನಿ.ಪಿ-12 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಡಿಕ್ರಿದಾರರ ಪರ ವಕೀಲರಿಂದಃ-</u>

ವೀಲುನಾಮೆಯ ಪ್ರಕಾರ ಅಶೋಕ್ ಇವರಿಗೆ ಪೂರ್ವ-ಪಶ್ಚಿಮ 7.5 ಅಡಿ ಮತ್ತು ಉತ್ತರ-ದಕ್ಷಿಣ 30 ಅಡಿ ಜಾಗ ಬಂದಿದೆ. ವೀಲುನಾಮೆಯಲ್ಲಿ ಬರೆದಿರುವ ಆಸ್ತಿಯ ಸಂಖ್ಯೆ 4127/4018 ಇರುತ್ತದೆ. ಅಶೋಕ್ ಇವರಿಗೆ ಬಂದ ಆಸ್ತಿಯ ಚಕ್ಕುಬಂಧಿ ಹೇಳಲು ಬರುತ್ತದೆ. ಪೂರ್ವಕ್ಕೆ ಗೂಡ್ ಶೆಡ್ ರೋಡ್, ಪಶ್ಚಿಮಕ್ಕೆ ಮಂಡಲ್ ಖಾನ್ ಸಾಹೇಬ್ ಇವರ ನಿವೇಶನ, ಉತ್ತರಕ್ಕೆ ನಾಗರಾಜ್ ಅವರ ನಿವೇಶನ ಮತ್ತು ದಕ್ಷಿಣಕ್ಕೆ ಕೃಷ್ಣಪ್ಪ ರವರ ಮನೆ ಬರುತ್ತದೆ. ಸುಶೀಲಮ್ಮನವರಿಗೆ ವೀಲುನಾಮೆಯ ಮೂಲಕ ಖಾಲಿ ನಿವೇಶನ ಬಂದಿದೆ, ಅದರ ನಂಬರ್ 4128/4018 ಇರುತ್ತದೆ. ಅದರ ವಿಸ್ತೀರ್ಣ 34 + 6 /2 ಎಂದರೆ ಸರಿ. ಸುಶೀಲಮ್ಮನವರಿಗೆ ಬಂದ ಆಸ್ತಿಯ ಪೂರ್ವಕ್ಕೆ ಗೂಡ್ ಶೆಡ್ ರಸ್ತೆ ಇದೆ ಎಂದರೆ ಸರಿ, ಪಶ್ಚಿಮಕ್ಕೆ ಮಂಡಲ್ ಖಾನ್ ಸಾಹೇಬ್ ಇವರ ಹಿತ್ತಲು, ಉತ್ತರಕ್ಕೆ ರಂಗನಾಥಶೆಟ್ಟಿ ರವರ ನಿವೇಶನ ಮತ್ತು ದಕ್ಷಿಣಕ್ಕೆ ಕೃಷ್ಣಪ್ಪ ಇವರ ಮನೆ ಬರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಹೊರತುಪಡಿಸಿ, ಜಮೀನು ಕೂಡ ವೀಲುನಾಮೆಯ ಮೂಲಕ ಹಂಚಿಕೆ ಆಗಿದೆ ಎಂದರೆ ಸರಿ. ಸುಶೀಲಮ್ಮನವರಿಗೆ ಮೇಲಿನ ಖಾಲಿ ನಿವೇನಶನದಲ್ಲಿ ಪೂರ್ವ-ಪಶ್ಚಿಮ 34 ಅಡಿ, ಉತ್ತರ-ದಕ್ಷಿಣ 15 ಅಡಿ ಅಳತೆಯ ಭಾಗ ಹೋಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದರಲ್ಲಿ ಅರ್ಧ ಭಾಗ ಹೋಗಿದೆ ಎಂದು ಹೇಳುತ್ತಾರೆ. ಸಂಪೂರ್ಣ ಮೇಲಿನ ಅಳತೆಯ ಆಸ್ತಿ ಸುಶೀಲಮ್ಮನವರಿಗೆ ಹೋಗಿದೆ ಎಂದರೆ ಸರಿಯಲ್ಲ.

2. ಅಶೋಕ್ ಇವರಿಗೆ ವೀಲುನಾಮೆಯ ಮೂಲಕ ಕರೆ ಹೆಂಚಿನ ಮನೆ ಕೊಟ್ಟಿದ್ದಾರೆ ಎಂದರೆ ಸರಿ. ಸುಶೀಲಮ್ಮನವರಿಗೆ ಖಾಲಿ ನಿವೇಶನ ಮಾತ್ರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸುಶೀಲಮ್ಮ ಮತ್ತು ಅಶೋಕ್‌ರವರಿಗೆ ಮನೆ, ಜಮೀನು ಮತ್ತು ನಿವೇಶನದಲ್ಲಿ ಸಮ ಭಾಗ ಬಂದಿದೆ ಎಂದು ಹೇಳುತ್ತಾರೆ. ಸುಶೀಲಮ್ಮನವರಿಗೆ ಬಂದ ಮನೆಯ ಅರ್ಧ ಭಾಗವನ್ನು ನಿ.ಪಿ-3 ರ ಪ್ರಕಾರ ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ಖರೀದಿ ಮಾಡಿದ ಮನೆಯ ವಿಸ್ತೀರ್ಣ 34 x 8 ಅಡಿ ಎಂದರೆ ಸರಿ. ಸದರಿ ಆಸ್ತಿಯ ಪೂರ್ವಕ್ಕೆ ಮುನ್ಸಿಫಲ್ ರಸ್ತೆ, ಪಶ್ಚಿಮಕ್ಕೆ ಮಂಡಲ್ ಖಾನ್ ಇವರ ಹಿತ್ತಲು ಇದೆ ಎಂದರೆ ಸರಿ. ಉತ್ತರಕ್ಕೆ ಸುಶೀಲಮ್ಮನವರ ಭಾಗದ ಖಾಲಿ ನಿವೇಶನ ಇದೆ ಎಂದರೆ ಸರಿಯಲ್ಲ, ಅದೇ ರೀತಿ ನಿ.ಪಿ-3 ರಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಯಾವ ಆಸ್ತಿ ಇದೆ ಎಂದರೆ ಸಾಕ್ಷಿಯು ಸುಶೀಲಮ್ಮ ಮತ್ತು ಅಶೋಕ್ ನವರಿಗೆ ಸೇರಿದ ಖಾಲಿ ನಿವೇಶನ ಇದೆ ಎಂದು ಹೇಳುತ್ತಾರೆ. ದಕ್ಷಿಣಕ್ಕೆ ಶೆಟ್ಟಿಯವರ ಖಾಲಿ ನಿವೇಶನ ಇದೆ ಅವರ ಹೆಸರು ಗೊತ್ತಿಲ್ಲ. ನಿ.ಪಿ-3 ರ ಪ್ರಕಾರ ನಮ್ಮ ತಂದೆ ಖರೀದಿ ಹಿಡಿದ ಮನೆಯ ಉತ್ತರಕ್ಕೆ ಸುಶೀಲಮ್ಮನವರಿಗೆ ಸೇರಿದ ಖಾಲಿ ನಿವೇಶನ ಇದೆ ಎಂದರೆ ಸರಿಯಲ್ಲ ಮತ್ತು ದಕ್ಷಿಣಕ್ಕೆ ಇ-ಅಸೆಸ್ಮೆಂಟ್ ಪೈಕಿ 34 x 8 ಅಡಿ ಅಶೋಕ ಬಿನ್ ಕೃಷ್ಣಪ್ಪನವರಿಗೆ ಸೇರಿದ ಮನೆ ಇದೆ ಎಂದರೆ ಸರಿಯಲ್ಲ. ಇದೇ ರೀತಿ ಸ್ಪಷ್ಟವಾಗಿ ನಿ.ಪಿ-3 ರಲ್ಲಿ ಬರೆಯಲಾಗಿದ ಎಂದರೆ ಸರಿಯಲ್ಲ.

3. ಗೌರಮ್ಮ ತಾಯಿ ದೊಡ್ಡಮ್ಮ ಬರೆದುಕೊಟ್ಟ ವೀಲುನಾಮೆಯ ಆಧಾರದ ಮೇಲೆ ಅಶೋಕನವರಿಗೆ ಮನೆ, ನಿವೇಶನ ಮತ್ತು ಜಮೀನು ಬಂದಿರುತ್ತದೆ. 4127/4018 ರ ನಿವೇಶನದಲ್ಲಿ 7.5 x 50 ಅಡಿ ವಿಸ್ತೀರ್ಣದ ಆಸ್ತಿ ಬಂದಿರುತ್ತದೆ. ಸದರಿ ಆಸ್ತಿಯ ಪೂರ್ವಕ್ಕೆ ರಂಗನಾಥಶೆಟ್ಟಿ ಇವರ ಮನೆ, ಪಶ್ಚಿಮಕ್ಕೆ ಸುಶೀಲಮ್ಮನವರಿಗೆ ಸೇರಿದ ಸೈಟು, ಉತ್ತರಕ್ಕೆ ಗೂಡ್ ಶೆಡ್ ರೋಡ್ ಮತ್ತು ದಕ್ಷಿಣಕ್ಕೆ ಮಂಡಲ್ ಖಾನ್ ಸಾಬ್ ಇವರ ಮನೆ ಇರುತ್ತದೆ. ಸದರಿ ಚಕ್ಕುಬಂಧಿ ಮದ್ಯದಲ್ಲಿ ಇದೆ ಎನ್ನಲಾಗುವ ಯಾವುದೇ ಆಸ್ತಿಯನ್ನು ಗೌರಮ್ಮನವರು ಅಶೋಕನವರಿಗ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಶೀಲಮ್ಮನವರು ತಮಗೆ ಸೇರಿದ ಆಸ್ತಿಯನ್ನು ಅಂದರೆ ಆಸ್ತಿ ನಂಬರ್ 34/98/3783 ಅಳತೆ 34 + 6 /2 ವಿಸ್ತೀರ್ಣದ ಖಾಲಿ ನಿವೇಶನವನ್ನು ಅಣ್ಣಯನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿರುವ ಆಸ್ತಿಯ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ. ಪಶ್ಚಿಮಕ್ಕೆ ಮಂಡಲ್ ಖಾನ್ ಇವರ ಮನೆ ಮತ್ತು ಹಿತ್ತಲು ಇದೆ ಎಂದರೆ ಸರಿ. ಉತ್ತರಕ್ಕೆ ರಂಗನಾಥ ಶೆಟ್ಟಿ ಇವರ ನಿವೇಶನ ಇದೆ ಎಂದರೆ ಸರಿ. ದಕ್ಷಿಣಕ್ಕೆ ಅಶೋಕ್ ಈತನ ಮನೆ ಇದೆ ಎಂದರೆ ಸರಿ.

4. ಸುಶೀಲಮ್ಮನ ಗಂಡನ ಹೆಸರು ಚಿಕ್ಕೇಗೌಡ ಎಂದರೆ ಸರಿ. ಅವರಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ, ಅವರ ಹೆಸರು ಲತಾ, ಉಷಾ, ಜ್ಯೋತಿ ಮತ್ತು ರಮೇಶ ಎಂದರೆ ಸರಿ. ನನ್ನ ತಂದೆ ಚಿಕ್ಕೇಗೌಡರ ಮಗ ರಮೇಶ್ ಇವರ ಜಿ.ಪಿ.ಎ ಆಗಿ ಮೂಲ ದಾವೆ 13/2011 ರಂತೆ ವ್ಯಾಜ್ಯ ಹೂಡಿದ್ದರು ಎಂದರೆ ಸರಿ. ಅದರಲ್ಲಿ ಅವರ ತಾಯಿ ಸುಶೀಲಮ್ಮ, ಅಣ್ಣಯ್ಯ ಮತ್ತು ಇತರರು

ಪ್ರತಿವಾದಿಗಳು ಇದ್ದರು ಎಂದರೆ ಸರಿ.  ವೀಲುನಾಮೆಯ ಪ್ರಕಾರ ಸುಶೀಲಮ್ಮನವರಿಗೆ ಬಂದ ಆಸ್ತಿಗಳನ್ನು  ಅಣ್ಣಯ್ಯ ಮತ್ತು ಕೃಷ್ಣಸ್ವಾಮಿಯವರಿಗೆ ಕ್ರಯದ ಮೂಲಕ ಮಾರಾಟ ಮಾಡಿರುವುದು ಅಸಿಂಧು ಆಗಿದೆ ಎಂದು ಕೇಳಿಕೊಂಡಿದ್ದರು ಎಂದರೆ ಸರಿ.  ಸದರಿ ದಾವೆ ವಿಚಾರಣೆ ಆದ ನಂತರದಲ್ಲಿ ವಜಾ ಆಯಿತು ಎಂದರೆ ಸರಿ, ಸಾಕ್ಷಿಯು ಮುಂದುವರೆದು, ಅದರ ವಿರುದ್ಧ ಅಪೀಲು ಹಾಕಲಾಗಿದೆ ಎನ್ನುತ್ತಾರೆ.  ಸದರಿ ಮೂಲದಾವೆಯಲ್ಲಿ ಅಣ್ಣಯನವರಿಗೆ ಮಾರಾಟ ಮಾಡಿದ ಆಸ್ತಿಯನ್ನು ನಂಬರ್ 3498/3108 ವಿಸ್ತೀರ್ಣ  15 x 34 + 6 /2  ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಸುಳ್ಳು ತೋರಿಸಿದ್ದಾರೆ ಎನ್ನುತ್ತಾರೆ.  ಆರೀತಿ ಆಸ್ತಿಯ ವಿವರಣೆಯನ್ನು ನನ್ನ ತಂದೆಯೇ ಮಾಡಿದ್ದಾರೆ ಎಂದರೆ ಸಾಕ್ಷಿಯು, ತಪ್ಪು ಮಾಡಿದ್ದಾರೆ ಎನ್ನುತ್ತಾರೆ.  ಅದರಲ್ಲಿ ಚಕ್ಕುಬಂಧಿ ಕೂಡ ನಮೂದು ಮಾಡಿದ್ದಾರೆ ಎಂದರೆ ಸರಿ, ಅದರ ಪೂರ್ವಕ್ಕೆ ರಸ್ತೆ ಎಂದು ತೋರಿಸಿದ್ದಾರೆ, ಪಶ್ಚಿಮಕ್ಕೆ ಮಂಡಲ್ ಖಾನ್ ಸಾಹೇಬರ ಆಸ್ತಿ, ದಕ್ಷಿಣಕ್ಕೆ ರಂಗನಾಥಶೆಟ್ಟಿ ಇವರ ಆಸ್ತಿ ಮತ್ತು ಉತ್ತರಕ್ಕೆ ಅಶೋಕ್ ಗೆ ಸೇರಿದ ವೀಲುನಾಮೆಯ ಮೂಲಕ ಬಂದ ಆಸ್ತಿ ಎಂದು ತೋರಿಸಲಾಗಿದೆ ಎಂದರೆ ಸರಿ.  ಈ ಮೇಲಿನ ಆಸ್ತಿಯ ಸಂಬಂಧವಾಗಿ ಈ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆದಿದೆ ಎಂದರೆ ಸರಿ.  ನಿ.ಪಿ-6 ರ ಪ್ರಕಾರ ಕೃಷ್ಣಪ್ಪನವರು ಖರೀದಿ ಮಾಡಿದ ಆಸ್ತಿ ಮತ್ತು ಅಶೋಕ್ ನವರಿಗೆ ವೀಲ್ ಮೂಲಕ ಬಂದ ಆಸ್ತಿಗೆ 4126/4017 ಎಂದು ತೋರಿಸಿದ್ದಾರೆ ಎಂದರೆ ಸರಿ.  ಅದರ ವಿಸ್ತೀರ್ಣವನ್ನು 16 x 34 ಎಂದು ತೋರಿಸಿದ್ದಾರೆ ಎಂದರೆ ಸರಿ.  ಅದೇ ರೀತಿ ಟಿ.ಜಿ ಅಣ್ಣಯ್ಯನವರಿಗೆ 4127/4018 ರಲ್ಲಿ  15 x 40 ವಿಸ್ತೀರ್ಣದ ಆಸ್ತಿ ನಮೂದು ಆಗಿದೆ ಎಂದರೆ ಸಾಕ್ಷಿಯು ಆ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ, ಅವರಿಗೆ ಯಾವುದೇ  ಆಸ್ತಿ ಬರುವುದಿಲ್ಲ ಎಂದು ಹೇಳುತ್ತಾರೆ.  ಸಾಕ್ಷಿಗೆ ನಿ.ಪಿ-9 ನ್ನು ತೋರಿಸಿ ಇದರಲ್ಲಿ ಬರೆದಿರುವ ಅಂಶಗಳು ಸರಿ ಇವೆಯೇ ಎಂದು ಕೇಳಿದರೆ ಸರಿ ಇವೆ ಎಂದು ಹೇಳುತ್ತಾರೆ.  ನಿ.ಪಿ-6 ರಲ್ಲಿ ಬರೆದಿರುವ ಸಂಗತಿಗಳು ಸರಿ ಇರುವುದಿಲ್ಲ ಎಂದು ಹೇಳುತ್ತಾರೆ.  ನಿ.ಪಿ-6 ಕ್ರಮಬದ್ಧವಾಗಿ ಇಲ್ಲದಿರುವುದನ್ನು ನಾವು ಪ್ರಶ್ನೆ ಮಾಡಿ ಯಾವುದೇ ಪ್ರಾಧಿಕಾರಕ್ಕೆ ಅರ್ಜಿ ವಗೈರೆ ಸಲ್ಲಿಸಿಲ್ಲ. ಸುಶೀಲಮ್ಮನವರ ಆಸ್ತಿಯೇ ಬೇರೆ ಮತ್ತು ಅಶೋಕ್  ರವರಿಗೆ ಸೇರಿದ ಆಸ್ತಿಯೇ ಬೇರೆ ಎಂದರೆ ಸರಿಯಲ್ಲ.  ಅಶೋಕ್ ನವರಿಗೆ ವೀಲುನಾಮೆಯ ಮೂಲಕ ಬಂದಿರುವ ಆಸ್ತಿಗಳಲ್ಲಿ ಸುಶೀಲಮ್ಮನವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.  ಸುಶೀಲಮ್ಮನವರ ಆಸ್ತಿಗಳಲ್ಲಿ ಕೃಷ್ಣಪ್ಪ ನವರಿಗೆ ಆಗಲೀ ಅಥವಾ ಅಶೋಕ್ ಇವರಿಗೆ ಆಗಲೀ ಯಾವುದೇ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.  ಅಸೆಸ್ಮೆಂಟ್ ನಂಬರುಗಳು ಬೇರೆ ಬೇರೆ ಎಂದರೆ ಸರಿ.  ವಿಸ್ತೀರ್ಣ ಮತ್ತು ಚಕ್ಕುಬಂಧಿ ಬೇರೆ ಬೇರೆ ಎಂದರೆ ಸರಿ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.